ಸಾಕ್ಷಿಯನ್ನು ದಿಃ **28.01.2021** ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ದಾಖಲೆಗಳನ್ನು ಗುರುತಿಸುವ ಬಗ್ಗೆ ಮುಂದುವರಿದ ಮುಖ್ಯ ವಿಚಾರಣೆ ವಾದಿ ಪರ ವಕೀಲರಾದ ಶ್ರೀ ಎಸ್.ಜೆ ವಕೀಲರಿಂದಃ

ನಾನು ದಿನಾಂಕ **15.02.1956** ರ ನೋಂದಾಯಿತ ಕ್ರಯ ಪತ್ರದ ದೃಡೀಕೃತ ನಕಲನ್ನು ಹಾಜರುಪಡಿಸುತ್ತಿದ್ದೇನೆ ಅದನ್ನು ನಿಪಿ-1 ಎಂದು, ದಿನಾಂಕ **22.08.1988** ರ ಮೂಲ ಕ್ರಯ ಪತ್ರವನ್ನು ನಿಪಿ-2 ಎಂದು, ಕಾನೂನು ತಿಳುವಳಿಕೆ ಪತ್ರದ ಕಚೇರಿ ಪ್ರತಿಯನ್ನು ನಿಪಿ-3 ಎಂದು, ನಾಲ್ಕು ಅಂಚೆ ರಸೀದಿಗಳನ್ನು ನಿಪಿ-4 ರಿಂದ ನಿಪಿ-7 ಎಂದು, ಎರಡು ಅಂಚೆ ಸ್ವೀಕೃತಿಗಳನ್ನು ನಿಪಿ-8 ಮತ್ತು ನಿಪಿ-9 ಎಂದು, ದಿನಾಂಕ **05.12.2018** ರ ನೋಂದಾಯಿತ ಕ್ರಯ ಪತ್ರದ ದೃಡೀಕೃತ ನಕಲನ್ನು ನಿಪಿ-10 ಎಂದು, ದಿನಾಂಕ **03.09.1976** ರ ನೋಂದಾಯಿತ ಕ್ರಯ ಪತ್ರದ ದೃಡೀಕೃತ ನಕಲನ್ನು ನಿಪಿ-11 ಎಂದು, ಹಿಸಾ ಟಿಪ್ಪಣಿಯ ದೃಡೀಕೃತ ನಕಲನ್ನು ನಿಪಿ-12 ಎಂದು, ಅಟ್ಲಾಸ್ ನ ದೃಡೀಕೃತ ನಕಲನ್ನು ನಿಪಿ-13 ಎಂದು, ಗಣಕೀಕೃತ ಎಂ.ಆರ್ ಟಿ-74/2017-2018 ನ್ನು ನಿಪಿ-14 ಎಂದು, ದಿನಾಂಕ **06.02.1980** ರ ನೋಂದಾಯಿತ ಕ್ರಯ ಪತ್ರದ ದೃಡೀಕೃತ ನಕಲನ್ನು ನಿಪಿ-15 ಎಂದು, ಆಕಾರ ಬಂಧನ ದೃಡೀಕೃತ ನಕಲನ್ನು ನಿಪಿ-16 ಎಂದು, ಆರ್.ಆರ್ ಪಕ್ಕಾ ಬುಕ್ಕಿನ ದೃಡೀಕೃತ ನಕಲನ್ನು ನಿಪಿ-17 ಎಂದು, ಭೂಮಿಯ ವರದಿಯನ್ನು ನಿಪಿ-18 ಎಂದು, ನಮೂನೆ-10 ರ ದೃಡೀಕೃತ ನಕಲನ್ನು ನಿಪಿ-19 ಎಂದು, ಅಟ್ಲಾಸ್ ನ ದೃಡೀಕೃತ ನಕಲನ್ನು ನಿಪಿ-20 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿಗಳು ಪ್ರತಿವಾದ ಪತ್ರಗಳನ್ನು ಸಲ್ಲಿಸದೇ ಇರುವುದರಿಂದ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.

ತೆರೆದ ನ್ಯಾಯಾಲಯದಲ್ಲಿ ಈ ಮೇಲೆ ಸಾಕ್ಷಿ ಸ್ವತಃ ಹೇಳಿದ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ

**ಸಿವಿಲ್ ನ್ಯಾಯಾಧೀಶರು,**

**ತಿ.ನರಸೀಪುರ.**